ಅದು' ಅಂದಳು. ಸೂರಿ 'ತಾಳು' ಅಂದವನೇ ಗಾಡಿ ನಿಲ್ಲಿಸಿ, ಎಂಟಾಣೆ ಪಕೋಡ ಕಟ್ಟಿಸಿ ತಂದ, ಪೊಟ್ಟಣ ಬಿಚ್ಚಿ ಅವಳ ಮುಂದೊಡ್ಡಿದ. ಸೂರಿ ಆ ದಿನ ಅಮ್ಮನ ಟ್ರಂಕಿನಿಂದ ತೆಗೆದು ಹುಡುಗಾಟಕ್ಕೆ ಬೆರಳಿಗೆ ಹಾಕಿಕೊಂಡಿದ್ದ ಹರಳಿನ ಉಂಗುರ ಅವಳ ಕಣ್ಣಿಗೆ ಬಿತ್ತು. ಒಂದು ಕ್ಷಣ ಅದನ್ನೇ ಕಣ್ಣಿಟ್ಟು ನೋಡಿದಳು. ಸೂರಿ ಅವಳು ಪಕೋಡದ ಕಡೆ ಕುತೂಹಲದಿಂದ ನೋಡುತ್ತಿದ್ದಾಳೆಂದುಕೊಂಡು 'ತೊಗೊ, ತಿನ್ನು' ಅಂದ. ಭಯ, ಸಂಕೋಚಗಳಿಂದ ಒಂದನ್ನೆತ್ತಿ ಬಾಯಿಗೆ ಹಾಕಿಕೊಂಡಳು. ಅವಳಿಗೂ ರುಚಿಸಿತು. ದಾರಿಯುದ್ದಕ್ಕೂ ಪಕೋಡ ತಿನ್ನುತ್ತ ಇಬ್ಬರೂ ಹರಟುತ್ತಿದ್ದರು.

ಈಗ ಹುಡುಗಿ ತೀರಾ ಹತ್ತಿರದವಳಾಗಿ ಬಿಟ್ಟಳು. ಹಾಳುಬಿದ್ದ ಗುಂಬಜ್ ರಸ್ತೆಯಲ್ಲಿ ಅವಳು ಥಟ್ಟನೆ ಅವನ ಕೈಹಿಡಿದು 'ನಿನ್ನ ಹೆಸರೇ ಹೇಳಲಿಲ್ಲವಲ್ಲ' ಅಂದಳು. ಸೂರಿಯ ಕೈಗೆ ಮಿಂಚು ಬಡಿದಂತಾಯಿತು. ಆ ವಿದ್ಯುತ್ ಸ್ಪರ್ಶಕ್ಕೆ ಮೈಕಂಪಿಸಿತು. ಅವನು ಒಂದು ಕ್ಷಣ ಕಣ್ಣುಮುಚ್ಚಿ, ಅದರ ಸುಖ ಸವಿದ. ಸೂರಿಗೆ ಇದು ಹೊಸ ಅನುಭವ. ಗಾಡಿಯಲ್ಲಿ ಅವಳ ಪಕ್ಕ ಕೂತಾಗಿನಿಂದ ಅವನೊಳಗೆ ವರ್ಷಗಟ್ಟಲೆ ಮೈಮುದುಡಿಕೊಂಡು ಕುಳಿತಿದ್ದ ಯಾವುದೋ ಸುಪ್ತ ಭಾವನೆ ಕೊಂಚ, ಕೊಂಚವಾಗಿ ರೆಕ್ಕೆ ಬಿಚ್ಚಿಕೊಳ್ಳುತ್ತ ಹೋಗಿತ್ತು. ಈಗ ಅವನಿಗೆ ತಾನು, ತನ್ನ ತಾಯಿ, ತನ್ನ ಮನೆ, ತನ್ನ ಹಿನ್ನೆಲೆ, ಮುನ್ನೆಲೆಗಳೆಲ್ಲ ಮರೆತು ಹೋದವು. ಮನಸ್ಸು ಗಾಳಿಪಟದಂತೆ ಹಾರುತ್ತಿತ್ತು.

'ನಿನ್ನ ಹೆಸರೇನು ಮೊದಲು ಹೇಳು' ಅಂದ. ಅವಳು 'ಜೋನ್' ಅಂದಳು. 'ಜೋನ್... ಜೋನಿ.... ಜೋನಿ ಬೆಲ್ಲ' ಎಂದು ಸೂರಿ ಗೊಳ್ಳನೆ ನಕ್ಕ. ಜೋನಳಿಗೆ ತಬ್ಬಿಬ್ಬಾಯಿತು. 'ಏಕೆ ನಗುತ್ತಿ' ಅಂದಳು. ನಮ್ಮ ಭಾಷೆಯಲ್ಲಿ 'ಜೋನ' ಅಂದರೆ ಬೆಲ್ಲದ ಪಾಕ ಎಂದು ಹೇಳಿ, ಬೆಲ್ಲ ಅಂದರೇನೆಂದು ವಿವರಿಸಿದ. ವಿಸ್ತರಿಸುವ ಅಗತ್ಯವೇ ಇರಲಿಲ್ಲ. ಆ ಮಾತಿನ ಧ್ವನಿಯಲ್ಲಿ ಅವನ ಮನಸ್ಥಿತಿಯನ್ನು ಗುರುತಿಸಿ ತಾನೂ ಜೋರಾಗಿ ನಕ್ಕಳು. ಅವಳು ಹಿಡಿದ ಕೈ ಬಿಟ್ಟರಲಿಲ್ಲ. ಅವನ ಬೆರಗಳುಗಳು ಅವಳ ಕೈಯ ಕೆಂಪನೆಯ ಮೃದುತ್ವದ ಬೆಲ್ಲದ ಸವಿಯನ್ನು ಚಪ್ಪರಿಸುತ್ತಿದ್ದರೆ, ಅವಳ ಬೆರಳು ಅವನಿಗೆ ಅರಿವಿಲ್ಲದಂತೆ ಹರಳಿನ ಉಂಗುರವನ್ನು ಸವರುತ್ತಿತ್ತು.

ಗುಂಬಜ್, ಸಂಗಮಗಳನ್ನು ಮುಗಿಸಿ, ದರಿಯಾದೌಲತ್ ಅರಮನೆ, ಉದ್ಯಾನ, ಹೊಳೆಗಳನ್ನು ನೋಡಿ, ಇಬ್ಬರೂ ಸುಧಾರಿಸಿಕೊಳ್ಳಲೆಂದು ಒಂದು ಮರದ ಕೆಳಗೆ ಕೂತರು. ಜೋನ್ ಬುಟ್ಟಿಯಿಂದ ಒಂದು ಪೊಟ್ಟಣ, ಫ್ಲಾಸ್ಕ್, ಎರಡು ಸೇಬಿನ ಹಣ್ಣುಗಳನ್ನು ತೆಗೆದಳು. ಸೂರಿಗೆ ತಾನೂ ಏನಾದರೂ ತಿನ್ನಲು ತರಬೇಕಾಗಿತ್ತು, ಮೊದಲೇ ಹೊಳೆಯದೆ ತಪ್ಪಾಯಿತು ಅನ್ನಿಸಿ ನಾಚಿಕೆ ಆಯಿತು. ಅವಳು ಪೊಟ್ಟಣ ಬಿಚ್ಚಿ ಸೂರಿಯ ಮುಂದೆ ಹಿಡಿದಳು. ಎರಡೆರಡು ಬ್ರೆಡ್ ಹಲ್ಲೆಗಳ ನಡುವೆ ಟೊಮ್ಯಾಟೊ, ಸೌತೆಕಾಯಿ, ಇಲ್ಲವೇ ಮತ್ತೆಂಥದೋ. ಏನಿದು ಎಂದು ಕೇಳ ಹೊರಟವನು ಬಣ್ಣ ಬಯಲಾಗುತ್ತದೆಂದು ಸುಮ್ಮನೆ ಟೊಮ್ಯಾಟೊ ಇದ್ದ ಚೂರನ್ನು ಎತ್ತಿಕೊಂಡ. ಅವಳು ನಡುವೆ ಚಟ್ನಿಯಂತೆ ಕಂದು ಗೆಂಪು ಬಣ್ಣಕ್ಕಿದ್ದ ಏನನ್ನೋ ಹಾಕಿದ ಇನ್ನೊಂದನ್ನು ಕೈಗಿಡುತ್ತ 'ನೀವು ಭಾರತೀಯರಿಗೆ ಸ್ವಾಸ್ಥ್ಯಜ್ಞಾನ ಸಾಲದು, ನೀನು ಇಂಥಾದ್ದನ್ನ ತಿನ್ನಬೇಕು, ಶಕ್ತಿ ಬರುತ್ತೆ. ತುಂಬ ವೀಕ್ ಆಗಿ ಕಾಣುತ್ತಿ' ಅಂದಳು, ಸೂರಿ ನಾಚಿದ. ಆದಾದ ಮೇಲೆ ಕಾಫಿ, ಹಣ್ಣು, ಹೊರಡುವ ಹೊತ್ತಾಯಿತು. ಜೋನಿ ಪರ್ಸ್ ತೆಗೆದು, ಅದರಲ್ಲಿದ್ದ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತ, ತಲೆ ಬಾಚಿಕೊಳ್ಳತೊಡಗಿದಳು. ಆಗ ಅವಳೆಷ್ಟು ಚೆನ್ನಾಗಿ ಕಾಣುತ್ತಿದ್ದಳು! ಸೂರಿ ಜನ್ಮದಲ್ಲಿಯೇ ಅಂತಹ ಹುಡುಗಿಯನ್ನು ನೋಡುವುದಿರಲಿ, ಅವಳೊಂದಿಗೆ ಸ್ನೇಹ, ಸ್ನೇಹಕ್ಕೂ ಮಿಗಿಲಾದ ಅದೇನೋ ಉಂಟಾಗುವ ಭಾಗ್ಯ ತನ್ನ ಪಾಲಿಗಿದೆಯೆಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ.

ಜೋನಿ ತಲೆಬಾಚಿಕೊಳ್ಳುವುದರಲ್ಲಿ ಮಗ್ನಳಾಗಿದ್ದಾಗ, ಸೂರಿಯ ಕಣ್ಣು ಅನಾಯಾಸವಾಗಿ ಅವಳ ಪರ್ಸಿನ ಕಡೆ ಹರಿಯಿತು. ಅಲ್ಲಿ ಅವಳದ್ದೊಂದು ಫೋಟೊ ಇದ್ದದ್ದು ಕಂಡಿತು. 'ನೋಡಬಹುದೆ?'